KARN020013582025

# 1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ರಾಮನಗರ.

**:ಉಪಸ್ಥಿತರು :**

**ಶ್ರೀಮತಿ ನಿವೇದಿತ** ಬಿ.ಎ.ಎಲ್., ಎಲ್.ಎಲ್.ಬಿ.,

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರಾಮನಗರ.

**ದಿನಾಂಕ: 02 ನೇ ಮೇ 2026**

**ಅಸಲು ದಾವಾ ಸಂಖ್ಯೆ:574/2025**

**ವಾದಿ/ಯರು** : ಶ್ರೀ.ನಿಸ್ಸಾರ್ ಅಹಮ್ಮದ್

**-ವಿರುದ್ಧ-**

**ಪ್ರತಿವಾದಿ/ಯರು** : ಶ್ರೀ.ಪ್ಯಾರೇಜಾನ್ ಮತ್ತು ಇತರರು

**ಮಧ್ಯಂತರ ಅರ್ಜಿ-1 ರ ಪಕ್ಷಕಾರರು**

**ಅರ್ಜಿದಾರ/ವಾದಿಯರು** : ಶ್ರೀಮತಿ.ರಾಜಮ್ಮ

**-ವಿರುದ್ಧ-**

**ಎದುರುದಾರರು/ಪ್ರತಿವಾದಿಗಳು :** ಶ್ರೀಮತಿ.ಬಿ.ಎನ್.ಮಂಜುಳ ಮತ್ತು ಇತರರು

***

**ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಮೇಲೆ ಆದೇಶ**

ವಾದಿಯು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಮೇಲ್ಕಂಡ ದಾವೆಯು ಇತ್ಯಾರ್ಥವಾಗುವವರೆಗೆ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಅತಿಕ್ರಮ ಪ್ರವೇಶವನ್ನು ಮಾಡದಂತೆ ಹಾಗೂ ವಾದಿಯ ಸ್ವಾಧೀನಾನುಭವಕ್ಕೆ ಹಾಗೂ ವಾದಿಗೆ ತೊಂದರೆ ನೀಡದಂತೆ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. **<u>ಅರ್ಜಿಯ ಸಂಕ್ಷಿಪ್ತ ಸಾರಾಂಶವು ಈ ಕೆಳಗಿನಂತಿದೆಃ</u>**

ಅರ್ಜಿದಾರರು/ವಾದಿಯು ತಮ್ಮ ಪ್ರಮಾಣ ಪತ್ರದಲ್ಲಿ ಪ್ರಮಾಣೀಕರಿಸಿರುವಂತೆ, ವಾದಿಯು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ದಾಖಲು ಮಾಡಿದ್ದು, ವಾದಿಗೆ ಪ್ರತಿವಾದಿಗಳು ಪರಿಚಯಸ್ಥರೇನು ಆಗಿರುವುದಿಲ್ಲ. ಆದರೆ, ದಾವಾ ಷೆಡ್ಯೂಲ್ ಸ್ವತ್ತಿಗೆ ಆಗಾಗ್ಗೆ ಬಂದು ತೊಂದರೆ ನೀಡುತ್ತಿದ್ದು, ಈ ಬಗ್ಗೆ ಕೇಳಿ ಹೋದಾಗ ದಾವಾ ಷೆಡ್ಯೂಲ್ ಸ್ವತ್ತು 1ನೇ ಪ್ರತಿವಾದಿಯ ಹೆಸರಿನಲ್ಲಿದೆಂದು ತಗಾದೆ ತೆಗೆದಿರುತ್ತಾರೆ ಇದರ ಜೊತೆಗೆ 1ನೇ ಪ್ರತಿವಾದಿಯ ಸಹೋದರ 1ನೇ ಪ್ರತಿವಾದಿಯೊಂದಿಗೆ ವಾದಿಯ ದಾವಾ ಷೆಡ್ಯೂಲ್ ಸ್ವತ್ತಿನ ಸಂಬಂಧ ತಗಾದೆ ತೆಗೆದಿರುವುದರಿಂದ ಅವರನ್ನು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಲಾಗಿದ್ದು, ದಾವಾ ಷೆಡ್ಯೂಲ್ ಸ್ವತ್ತು ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ರಾಮನಗರ ಗ್ರಾಮದ ಸರ್ವೆ ನಂ.66/2 ರಲ್ಲಿ 18 ಗುಂಟೆ ಇದ್ದು, ಸದರಿ ಸ್ವತ್ತನ್ನು ವಾದಿಯು ದಿನಾಂಕಃ12.03.1964 ರಂದು ಅಬ್ದುಲ್ ಖದಾರ್ ಸಾಹೇಬ್ ರವರಿಂದ ನಿಸ್ಸಾರ್ ಅಹಮ್ಮದ್ ಸಾಬ್ @ ಮಸೂದ್ ಸಾಹೇಬ್

ರವರು ಅಂದರೆ ವಾದಿ ರೂ.1,000/- ಗಳಿಗೆ ಶುದ್ಧ ಕ್ರಯಕ್ಕೆ ಪಡೆದುಕೊಂಡಿದ್ದು, ಆದರೆ, ವಾದಿಯು ಕೆಲಸದ ಮೇಲೆ ಬೇರೆ ಊರಿಗೆ ವರ್ಗಾವಣೆ ಆಗಿದ್ದರಿಂದ ವಾದಿಯ ಹೆಸರಿಗೆ ಖಾತಾ ವರ್ಗಾವಣೆ ಆಗಿದೆಯೇ ಎಂದು ತಿಳಿದುಕೊಂಡಿರುವುದಿಲ್ಲ. ಆನಂತರ ವಾದಿಯು ನಿವೃತ್ತಿಯಾದ ಕಾರಣ ಮೇಲೆ ಹೇಳಿದ ವಿಳಾಸದಲ್ಲಿ ಖಾಯಂ ಆಗಿ ವಾಸವಾಗಿದ್ದು, ಪ್ರತಿವಾದಿಗಳಿಗೂ ದಾವಾ ಷೆಡ್ಯೂಲ್ ಸ್ವತ್ತಿಗೂ ಯಾವುದೇ ಸಂಬಂಧಗಳು ಇಲ್ಲದೇ ಇದ್ದರು ಸಹ ಕೈ ಬರಹದ ಪಹಣಿ ಪತ್ರಿಕೆಗಳಲ್ಲಿ ಮೊಹಮ್ಮದ್ ಅಲೀ ಸಾಬ್ ಹೆಸರನ್ನು ಕಂದಾಯಾಧಿಕಾರಿಗಳ ಜೊತೆ ಸಾಮೀಲಾಗಿ ಪ್ರತಿವಾದಿಗಳು ಸೇರಿಸಿಕೊಂಡು ಹಾಲೀ 1 ನೇ ಪ್ರತಿವಾದಿ ಪ್ಯಾರೇಜನ್ ತನ್ನ ಹೆಸರಿಗೆ ಮಹಮ್ಮದ್ ಅಲೀ ಸಾಬ್ ಮೃತಪಟ್ಟಿರುತ್ತಾರೆಂದು ಎಂ.ಆರ್.ಹೆಚ್: 7/2024-25 ರಂತೆ ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ.

3. ಮುಂದುವರೆದು ವಾದಿಯು ಹೇಳುವುದೇನೆಂದರೆ, ದಾವಾ ಷೆಡ್ಯೂಲ್ ಸ್ವತ್ತಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧವಿರುವುದಿಲ್ಲ ಆದರೆ ವಾದಿಯು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಒಟ್ಟು 3 ಗೋಡೋನ್‌ಗಳನ್ನು ನಿರ್ಮಿಸಿಕೊಂಡಿದ್ದು, ಈ ಮೊದಲು ಸದರಿ ಗೋಡೋನ್‌ಗಳನ್ನು ಬಾಡಿಗೆಗೆ ನೀಡಿದ್ದು, ಆದರೆ, ಪ್ರತಿವಾದಿಗಳು ಒಂದಲ್ಲಾ ಒಂದು ಕಾರಣ ಹೇಳಿ ಸದರಿ ಬಾಡಿಗೆಗೆ ಬರುವವರನ್ನು ಹೆದರಿಸಿ ಅಲ್ಲಿಂದ ಬಿಡಿಸಿ ಕಳುಹಿಸುತ್ತಿರುತ್ತಾರೆ. ಈ ಬಗ್ಗೆ ವಾದಿಯು ಹಲವಾರು ಬಾರಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದು, ಪೊಲೀಸಿನವರು ಪ್ರಕರಣ ಸ್ವರೂಪದ್ದಾಗಿರುವುದರಿಂದ ಏನು ಮಾಡಲು ಸಾಧ್ಯವಿಲ್ಲ ಎಂದು ಮೌಖಿಕವಾಗಿ ತಿಳಿಸಿದ್ದರು ಮತ್ತು ಸಿವಿಲ್ ನ್ಯಾಯಾಲಯದಲ್ಲಿ ಬಗೆ ಹರಿಸಿಕೊಳ್ಳುವಂತೆ ಸಹ ತಿಳಿಸಿರುತ್ತಾರೆ.

ಮುಂದುವರೆದು, ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯು 1ನೇ ಪ್ರತಿವಾದಿಯ ಹೆಸರಿಗೆ ಆಗಿರುವುದನ್ನು ಪ್ರಶ್ನಿಸಿ ವಿಭಾಗಾಧಿಕಾರಿಗಳ ನ್ಯಾಯಾಲಯ ರಾಮನಗರದಲ್ಲಿ ಪ್ರಕರಣ ಸಂಖ್ಯೆ: 852/24-25 ರಂತೆ ಪ್ರಕರಣ ದಾಖಲು ಮಾಡಿದ್ದು, ಸದರಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ. ಮುಂದುವರೆದು, ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಪ್ರತಿವಾದಿಗಳಿಗೆ ಯಾವುದೇ ರೀತಿಯ ಹಕ್ಕು ಬಾಧ್ಯತೆಗಳು ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳು ವಾದಿಗೆ ಸೇರಿದ ಸ್ವತ್ತಿನ ಶಾಂತಿಯುತ ಸ್ವಾಧೀನಕ್ಕೆ ಪದೇ ಪದೇ ಧಕ್ಕೆಯುಂಟು ಮಾಡುತ್ತಿರುತ್ತಾರೆ. ಈ ಬಗ್ಗೆ ಪೊಲೀಸ್ ದಾಖಲು ಮಾಡಿದ್ದರು ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ ಮತ್ತು ಈ ಬಗ್ಗೆ ಕೇಳಲು ಹೋದರೆ ನನ್ನ ಮೇಲೆ ಹಲ್ಲೇ ಮಾಡಲು ಮುಂದಾಗುತ್ತಾರೆ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ಒಂದುವೇಳೆ ಈ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ತುಂಬಲಾರದ ಕಷ್ಟನಷ್ಟ ಉಂಟಾಗುತ್ತದೆ. ಆದ್ದರಿಂದ ಅರ್ಜಿಗಳನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

4. ಪ್ರತಿವಾದಿಗಳಿಗೆ ಸಮನ್ಸ ಜಾರಿಯಾಗಿದ್ದು, ಪ್ರತಿವಾದಿ ಸಂಖ್ಯೆ.1ರವರು ತಮ್ಮ ವಕೀಲರ ಮುಖಾಂತರ ನ್ಯಾಯಲಯಕ್ಕೆ ಹಾಜರಾಗಿದ್ದು, ಪ್ರತಿವಾದಿ ಸಂಖ್ಯೆ.2ರವರು ಸದರಿ ಮಧ್ಯಂತರ ಅರ್ಜಿಗೆ ತಕರಾನ್ನಾಗಿ ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಕಾನೂನಡಿಯಲ್ಲಿ ಊರ್ಜಿತಗೊಳುವುದಿಲ್ಲ ಮತ್ತು ಸದರಿ ವಿಷಯಗಳು ವಾದಿಯು ಸೃಷ್ಟಿಸಿ ಕೊಂಡತದಾಗಿರುತ್ತದೆ. ಮುಂದುವರೆದು, ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ರಾಮನಗರ ಗ್ರಾಮದ ಸರ್ವೆ ನಂಬರ್ 66/2

ರಲ್ಲಿನ 00-18 ಗುಂಟೆ ಅಂದರೆ ದಾವಾ ಸ್ವತ್ತು ಪ್ರತಿವಾದಿಯ ತಾತನಾದ ಲೇಟ್ ಮಹಮ್ಮದ್ ಹೈದರ್ ಸಾಬ್ @ ಖಾದರ್ ನವಾಜ್ ಖಾನ್‌ರವರಿಗೆ ಸೇರಿದ ಸ್ವತ್ತಾಗಿರುತ್ತದೆ. ಪ್ರತಿವಾದಿಯ ತಾತನಾದ ಲೇಟ್ ಮಹಮ್ಮದ್ ಹೈದರ್ ಸಾಬ್ ಖಾನ್‌ರವರು ದಾವಾ @ ಖಾದರ್ ನವಾಜ್ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿದ್ದು, ಸಂಪೂರ್ಣ ಸ್ವಾಧೀನಾನುಭವದಲ್ಲಿದ್ದುಕೊಂಡು ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯ ವಗೈರೆಗಳನ್ನು ಕಟ್ಟಿಕೊಂಡು ಸಂಪೂರ್ಣ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು. ಮುಂದುವರೆದು, ಸದರಿಯವರ ಮರಣದ ನಂತರ ದಾವಾ ಸ್ವತ್ತಿಗೆ 1 ನೇ ಪ್ರತಿವಾದಿಯ ತಂದೆಯಾದ ಶ್ರೀ ಲೇಟ್ ಮಹಮ್ಮದ್ ಅಲಿ ಸಾಬ್‌ರವರು ಸಂಪೂರ್ಣ ಮಾಲೀಕರಾಗಿದ್ದು, ಸಂಪೂರ್ಣ ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯ ವಗೈರೆಗಳನ್ನು ಕಟ್ಟಿಕೊಂಡು ಸಂಪೂರ್ಣ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು. 1 ನೇ ಪ್ರತಿವಾದಿಯವರ ತಂದೆಯ ಮರಣದ ನಂತರ ದಾವಾ ಸ್ವತ್ತಿಗೆ 1 ನೇ ಪ್ರತಿವಾದಿಯು ಸಂಪೂರ್ಣ ಮಾಲೀಕರಾಗಿದ್ದು, ಸಂಪೂರ್ಣ ಸ್ವಾಧೀನಾನುಭವದಲ್ಲಿದ್ದುಕೊಂಡು ಸರ್ಕಾರಕ್ಕೆ ಕಟ್ಟಬೇಕಾದ ಕಂದಾಯ ವಗೈರೆಗಳನ್ನು ಕಟ್ಟಿಕೊಂಡು ಸಂಪೂರ್ಣ ವ್ಯವಸಾಯ ಮಾಡಿಕೊಂಡು ದಾವಾ ಸ್ವತ್ತಿನಲ್ಲಿ ಶೀಟಿನ ಮೂರು ಶೆಡ್‌ಗಳನ್ನು ಸಹಾ ನಿರ್ಮಾಣ ಮಾಡಿಕೊಡು ಸ್ವಾಧೀನಾನುಭವದಲ್ಲಿರುತ್ತಾರೆ.

5. ಮುಂದುವರೆದು 1 ನೇ ಪ್ರತಿವಾದಿ ಹೇಳುವುದೇನೆಂದರೆ, ವಾದಿಯು ದಾವಾ ಸ್ವತ್ತನ್ನು ದಿನಾಂಕ:12.03.1964 ರಂದು ಅಬ್ದುಲ್ ಖದಾರ್ ಸಾಹೇಬ್‌ರವರಿಂದ ಕ್ರಯಕ್ಕೆ ಪಡೆದುಕೊಳ್ಳಲಾಗಿರುತ್ತದೆ ಎಂದು ವಾದಿಯು ತಮ್ಮ ವಾದ ಪತ್ರದಲ್ಲಿ ತಿಳಿಸಿದ್ದು, ಸದರಿ ದಾವೆಗೆ ಅಬ್ದುಲ್ ಖದಾರ್ ಸಾಹೇಬ್‌ರವರು ಮಾಲೀಕರಾಗಿದ್ದು, ಸ್ವಾಧೀನಾನುಭವದಲ್ಲಿದ್ದರು ಎಂಬುದಕ್ಕೆ ಯಾವುದೇ

ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಅಬ್ದುಲಾ ಖದಾರ್ ಸಾಹೇಬ್‌ರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂಬುದನ್ನು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ಸದರಿ ವಿಷಯದಿಂದ ಮೇಲ್ನೋಟಕ್ಕೆ ಕಂಡು ಬರುವ ವಿಷಯವೆನೆಂದರೆ ವಾದಿಯು ದಾವಾ ಸ್ವತ್ತಿಗೆ ಮಾಲೀಕರಾಗಿರುವುದಿಲ್ಲ ಮತ್ತು ಸ್ವಾಧೀನಾನುಭವದಲ್ಲರುವುದಿಲ್ಲ ಎಂಬುದು ಸ್ವಷ್ಟವಾಗಿ ತಿಳಿದು ಬರುತ್ತದೆ. ಆದ್ದರಿಂದ ಸದರಿ ದಾವೆಯು ಕಾನೂನಿನಡಿ ಊರ್ಜಿತವಾದ ದಾವೆಯಾಗಿರುವುದಿಲ್ಲ. ಸದರಿ ದಾವೆಯು ಕಾನೂನಿನಡಿ ವಜಾ ದಾವೆಯಾಗಿರುತ್ತದೆ. ಮುಂದುವರೆದು ವಾದಿಯ ವಾದಪತ್ರದಲ್ಲಿ ಸಲ್ಲಿಸಿರುವ ಚೆಕ್ಕುಬಂದಿ ಸುಳ್ಳಗಿರುತ್ತದೆ. ಮುಂದುವರೆದು 1ನೇ ಪ್ರತಿವಾದಿಯ ಹೆಸರಿಗೆ ಆಗಿರುವುದನ್ನು ಪ್ರಶ್ನಿಸಿ ವಿಭಾಗಾಧಿಕಾರಿಗಳ ನ್ಯಾಯಾಲಯ ರಾಮನಗರದಲ್ಲಿ ಪ್ರಕರಣ ಸಂಖ್ಯೆ: 852/24-25 ರಂತೆ ಪ್ರಕರಣ ವಜಾಗೊಂಡಿರುತ್ತದೆ. ಮುಂದುವರೆದು ವಾದಿಯು ದಾವಾ ಸ್ವತ್ತಿಗೆ ಯಾವದೇ ಮಾಲೀಕರು ಆಗಿರುವುದಿಲ್ಲ, ದಾವಾ ಸ್ವತ್ತಿನಲ್ಲಿ ಸ್ವಾಧೀನಾನೂಭವದಲ್ಲಿ ಇರುವುದಿಲ್ಲ. ವಾದಿಯ ಹೆಸರಿನಲ್ಲಿ ಆಗಲಿ ಅಥವಾ ವಾದಿಯು ಕ್ರಯಕ್ಕೆ ಪಡೆದುಕೊಂಡಿರುತ್ತೇನೆಂದು ತಿಳಿಸುವ ವ್ಯಕ್ತಿಯ ಹೆಸರಿನಲ್ಲಿ ಸಹಾ ವಾದಿಯು ಯಾವುದೇ ದಾಖಲೆಗಳು ಇಲ್ಲದಿದ್ದರೂ ಕ್ರಯಪತ್ರವನ್ನು ಸೃಷ್ಟಿಸಿಕೊಂಡು ಪ್ರತಿವಾದಿಗಳಿಗೆ ತೊಂದರೆಯನ್ನು ನೀಡುವ ದುರುದ್ದೇಶದಿಂದ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಯು ಈ ದಾವೆಯಲ್ಲಿ ಕೇಳಿರುವ ಪರಿಹಾಗಳನ್ನು ಪಡೆದುಕೊಳ್ಳಲು ಅರ್ಹರಾಗಿರುವುದಿಲ್ಲ. ಆದರಿಂದ ಸದರಿ ಮಧ್ಯಂತರ ಅರ್ಜಿಯನ್ನು ಖರ್ಚಿನೊಂದಿಗೆ ತಿರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

6. ವಾದಿಯ ಮತ್ತು ಪ್ರತಿವಾದಿಗಳ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

7. ಈ ಕೆಳಗಿನ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತವೆ:

1. ವಾದಿಯು / ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಂತಹ ಮೇಲ್ನೋಟದ ಪ್ರಕರಣವಿರುವುದನ್ನು ರುಜುವಾತು ಪಡಿಸಿದ್ದಾರೆಯೇ?
2. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದಲ್ಲಿ/ನೀಡದೇ ಇದ್ದಲ್ಲಿ ವಾರಿದಿರವರಿಗೆ ಅತೀ ಹೆಚ್ಚಿನ ತೊಂದರೆ ಉಂಟಾಗುತ್ತದೆಯೇ?
3. ಅನುಕೂಲತೆಯ ತಕ್ಕಡಿ ಯಾರ ಪರವಾಗಿರುತ್ತದೆ?
4. ಏನು ಆದೇಶ?

8. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆ:

ಅಂಶ 1 : ನಕಾರಾತ್ಮಕ;

ಅಂಶ 2 : ನಕಾರಾತ್ಮಕ;

ಅಂಶ 3 : ನಕಾರಾತ್ಮಕ;

ಅಂಶ 4 : ಅಂತಿಮ ಆದೇಶದಂತೆಃ

**<u>ಕಾರಣಗಳು</u>**

9. **<u>ಅಂಶ-1:</u>** ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ

ವಿರುದ್ಧ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ದಾಖಲು ಮಾಡಿದ್ದು, ವಾದಿಯು ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಮೇಲ್ಕಂಡ ದಾವೆಯು ಇತ್ಯಾರ್ಥವಾಗುವವರೆಗೆ ಪ್ರತಿವಾದಿಗಳು ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಅತಿಕ್ರಮ ಪ್ರವೇಶವನ್ನು ಮಾಡದಂತೆ ಹಾಗೂ ವಾದಿಯ ಸ್ವಾಧೀನಾನುಭವಕ್ಕೆ ಹಾಗೂ ವಾದಿಗೆ ತೊಂದರೆ ನೀಡದಂತೆ ತಾತ್ಕಾಲಿಕ ತಡೆಯಾಜ್ಞೆ ನೀಡಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಗೆ ವಿರುದ್ಧವಾಗಿ ಪ್ರತಿವಾದಿ ಸಂಖ್ಯೆ.1 ರವರು ತಕರಾರನ್ನು ಸಲ್ಲಿಸಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಕಾನೂನಡಿಯಲ್ಲಿ ಊರ್ಜಿತಗೊಳುವುದಿಲ್ಲವೆಂದು, ಸದರಿ ಅರ್ಜಿಯು ಕಾಲಮಿತಿಯನ್ನು ಮೀರಿದ್ದು ಮತ್ತು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

10. ವಾದಿಯು ಮತ್ತು ಪ್ರತಿವಾದಿಗಳು ಹಾಜರುಪಡಿಸಿದ ದಾಖಲೆಗಳಾದ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಲಾಗಿ ಅದು ನೆರಳಚ್ಚು ಕ್ರಯಪತ್ರ, ಸಾಮಾನ್ಯ ಅಧಿಕಾರ ಪತ್ರ, ಋಣಭಾರ ರಹಿತ್ಯ ಪತ್ರ ಮತ್ತು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತಾರೆ. ಮುಂದುವರೆದು 1 ನೇ ಪ್ರತಿವಾದಿಯು ನೆರಳಚ್ಚು ಹಕ್ಕು ಬದಲಾವಣೆ ವಹಿ, ಆದೇಶ, ಋಣಭಾರ ರಹಿತ್ಯ ಪತ್ರ ಮತ್ತ ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಮಧ್ಯಂತರ ಅರ್ಜಿ ಮತ್ತು ಪ್ರಸ್ತುತ ವಾದಿ ಮತ್ತು ಪ್ರತಿವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಹಂತದಲ್ಲಿ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ ವಾದಿ ತಮ್ಮ ಮಾಲೀಕತ್ವವನ್ನು ನ್ಯಾಯಾಲಯದ ಮುಂದೆ ಸಾಭೀತುಪಡಿಸುವ ಹೊಣೆ ವಾದಿಯವರಾದ್ದೇ ಆಗಿರುತ್ತದೆ. ಅದು ಪೂರ್ಣ ಪ್ರಮಾಣದ ಸಾಕ್ಷಿಯ

ವಿಚಾರಣೆಯಿಂದ ಹೊರಬರಬೇಕಾಗಿರುತ್ತದೆ. ಆದ್ದರಿಂದ ವಾದಿಯವರು ಈ ಹಂತದಲ್ಲಿ ಮೇಲ್ನೋಟದ ನ್ಯಾಯಾಧೀಕರಣ (prima facie) ವಾದಿಯ ಪರವಾಗಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ.

11. ***ಮಾನ್ಯ ಸರ್ವೋಚ್ಚ ನ್ಯಾಯಾಲಯ*** *(1995) 5* ***Supreme Court Cases*** *545* ***between Gujarat Bottling Co.LTD. And others V/s Coca Coal Co. And other ಪ್ರಕರಣದಲ್ಲಿ***

> ***"Specific relief act*** *1963-s.42*-***Injunction enforcing negative stipulation in contract- Discretion of court- When can injunction be refused.***
>
> ***"Held: The grant of an interlocutory injunction during the pendency of legal proceedings is a matter requiring the exercise of discretion of the court. While exercising the discretion the court applies the following tests-(i)Whether the plaintiff has a prima facie case: (II) Whether the balance of convenience is in favour of the plaintiff; and (iii)Whether the plaintiff would suffer an irreparable injury if his prayer for interlocutory injunction is disallowed. The decision whether or not to grant an interlocutory injunction has to be taken at a time when the existence of the legal right assailed by the plaintiff and its alleged violation are both contested and***

***uncertain and remain uncertain till they are established at the trail on evidence. Relief by way of interlocutory injunction is granted to mitigate the risk of injustice to the plaintiff during the period before that uncertainty could be resolved. The object of the interlocutory injunction is to protect the plaintiff against injury by violation of his right for which he could not be adequately compensated in damages recoverable in the action if the uncertainty were resolved in his favour at trial. The need for such protection has however, to be weighed against the corresponding need of the defendant to be protected against injury resulting from his having been prevented from exercising his own legal rights for which he could not be adequately compensated. The court must weigh one need against another and determine where the "balance of convenience" lies. In order to protect the defendant while granting an interlocutory injunction in his favour the court can require the plaintiff to furnish an undertaking so that the defendant can be adequately compensated if the uncertainty were resolved in his favour at the trial"*** ಎಂದು ತಿಳಿಸಿರುತ್ತದೆ.

12. ಈ ಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತಿಳಿಸಿರುವಂತೆ ತಾತ್ಕಾಲೀಕ ತಡೆಯಾಜ್ಞೆ ಕೋರಿ ಅರ್ಜಿ ಸಲ್ಲಿಸಿದಾಗ ಸದರಿ ಪ್ರಕರಣವನ್ನು ತೀರ್ಮಾನ ಮಾಡುವಾಗ ಮೇಲ್ನೋಟದ ನ್ಯಾಯಾಧೀಕರಣ ಯಾರ ಪರವಾಗಿ ಇದೆ ಎಂಬುವುದನ್ನು ಹಾಗೂ ವಾದಿಯ ಪರ ವಿಚಾರಣೆ ಆಗುವ ಎಲ್ಲಾ ಅಂಶಗಳು ವಾದಿಯ ದಾವೆಯಲ್ಲಿ ಇದೆ ಎಂಬುವುದನ್ನು ಗಮನಿಸಬೇಕೆಂದು ಸ್ಪಷ್ಟವಾಗಿ ತಿಳಿಸಿರುತ್ತದೆ. ಅಲ್ಲದೇ ಅನುಕೂಲದ ತಕ್ಕಡಿ (balance of connivance) ಯಾವ ಪಕ್ಷಗಾರರ ಪರವಾಗಿ ಇರುತ್ತದೆ. ಒಂದು ವೇಳೆ ತಾತ್ಕಾಲೀಕ ತಡೆಯಾಜ್ಞೆ ನೀಡಿದರೆ ಯಾವ ಪಕ್ಷಗಾರರಿಗೆ ಹೆಚ್ಚಿನ ತೊಂದರೆ ಉಂಟಾಗುತ್ತದೆ ಎಂಬುವುದನ್ನು ಸ್ಪಷ್ಟವಾಗಿ ಗಮನಿಸಬೇಕು ಎಂದು ತಿಳಿಸಿರುತ್ತದೆ. ಈ ಮೇಲೆ ತಿಳಿಸಿರುವಂತೆ ಪ್ರಸ್ತುತವಾಗಿ ಮೇಲ್ನೋಟದ ನ್ಯಾಯಾಧೀಕರಣ ವಾದಿಯ ಪರವಾಗಿ ಇಲ್ಲದೇ ಇರುವುದು ಸ್ಪಷ್ಟವಾಗಿ ತಿಳಿದು ಬಂದಿರುತ್ತದೆ.

13. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ***Gowri shankara swamigalu V/s Siddaganga mutta ILR 1989 KAR 1701 that " the existence of prima facie case in the matter of granting injunction is really harbinger all the clear sing to go ahead in investigating for aspect of question for injunction if has no prima-facie case at all other case put forward was so week and tainted very title prospect of being accepted by the court, further question of balance of convenience and irreparable loss need not be considered"*** ಎಂದು ತಿಳಿಸಿರುತ್ತದೆ. ಅದರಂತೆ ವಾದಿಯ ಮತ್ತು ಪ್ರತಿವಾದಿಗಳು ಹಾಜರುಪಡಿಸಿದ ದಾಖಲೆಗಳನ್ನು ಗಮನಿಸಿದಾಗ ಮೇಲ್ನೋಟದ ನ್ಯಾಯಾಧೀಕರಣ ವಾದಿಯ ಪರವಾಗಿ ಇರುವುದಿಲ್ಲ. ಈ ಹಂತದಲ್ಲಿ ವಾದಿಯ ಪರವಾಗಿ ಮೇಲ್ನೋಟದ

ನ್ಯಾಯಾಧೀಕರಣ (prima-facie) ಇರುವುದಿಲ್ಲ. ಆದ್ದರಿಂದ **ಅಂಶ 1 ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ.**

14. **ಅಂಶ–2 ಮತ್ತು 3:**. ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಒಟ್ಟಿಗೆ ಚರ್ಚೆಗೆ ತಗೆದುಕೊಳ್ಳಲಾಗಿದೆ.

ಈಗಾಗಲೇ ಮೇಲೆ ತಿಳಿಸಿರುವಂತೆ ವಾದಿ ಮತ್ತು ಪ್ರತಿವಾದಿಗಳು ಹಾಜರು ಪಡಿಸಿರುವ ದಾಖಲೆಗಳನ್ನು ಗಮನಿಸಿದಾಗ ಸದರಿ ಸ್ವತ್ತಿನಲ್ಲಿ ವಾದಿಗೆ ಹಕ್ಕು ಇದೆ ಎಂಬ ಅಂಶವನ್ನು ನ್ಯಾಯಾಲಯದ ಮುಂದೆ ವಾದಿಯು ಪೂರ್ಣ ಪ್ರಮಾಣದ ವಿಚಾರಣೆಯ ಮೂಲಕ ಅವಶ್ಯಕ ದಾಖಲಾತಿಗಳ ಮೂಲಕ ರುಜುವಾತುಪಡಿಸಿದಲ್ಲಿ ವಾದಿಯು ತನ್ನ ಹಕ್ಕನ್ನು ಪಡೆಯಬಹುದಾಗಿದೆ. ಆದ್ದರಿಂದ ಈ ಹಂತದಲ್ಲಿ ವಾದಿಯ ಪರವಾಗಿ ಮೇಲ್ನೋಟದ ನ್ಯಾಯಾಧೀಕರಣ (prima-facie) ಇರುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿರುತ್ತದೆ. ಈ ಹಂತದಲ್ಲಿ ಅನುಕೂಲದ ತಕ್ಕಡಿ (balance of convenience) ವಾದಿಯ ಪರವಾಗಿ ಇರುವುದಿಲ್ಲ. ಒಂದು ವೇಳೆ ಅರ್ಜಿಗಳನ್ನು ಪುರಸ್ಕರಿಸಿದರೆ ಪ್ರತಿವಾದಿಗೆ ತುಂಬಲಾರದ ನಷ್ಟ (irreparable loss) ಉಂಟಾಗುತ್ತದೆ. ಸದರಿ ನಷ್ಟವನ್ನು ವಾದಿಯು ತುಂಬಿಕೊಡಲು ಸಾಧ್ಯವಿರುವುದಿಲ್ಲ ಎಂದು ಮನಗಂಡು **ಅಂಶ 2 ಮತ್ತು 3 ನ್ನು ನಕರಾತ್ಮಕ ಎಂದು ಉತ್ತರಿಸಲಾಗಿದೆ.**

15. **ಅಂಶ–4** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## ಆದೇಶ

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ-1 ರ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ.151 ರ ರ ಅರ್ಜಿನ್ನು ಖರ್ಚು ಸಹಿತ ತಿರಸ್ಕರಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಭಾಗಶಃ ಉಕ್ತಲೇಖನ ನೀಡಿ , ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ **ದಿನಾಂಕಃ 02 ನೇ ಮೇ 2026** ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ).

**(ಶ್ರೀಮತಿ· ನಿವೇದಿತ)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ರಾಮನಗರ.**